5) ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಸಂಬಂಧಿಸಿದ ಆಯಾ ತಾಲ್ಲೂಕುಗಳ ತಹಶೀಲ್ದಾರ್ ರವರಿಗೆ ಸಲ್ಲಿಸಬಹುದು.

6) ಬೇರೆ ಕಾರ್ಡಿನಿಂದ ಹೆಸರನ್ನು ತೆಗೆದ ದೃಢೀಕರಣ ಪತ್ರ, (Deletion Certificate) ವಿವಾಹ ದೃಢೀಕರಣ ಪತ್ರ, ಜನನ ಪ್ರಮಾಣ ಪತ್ರ (Birth certificate), ಮರಣ ಪ್ರಮಾಣ ಪತ್ರ (Death Certificate), ಕಾರ್ಡು ಹಿಂದಿರುಗಿಸಿದ ಅಧ್ಯರ್ಪಣ ಪತ್ರ (Surrender Certificate)ಗಳು ಒದಗಿಸಬಹುದಾದ ಅಗತ್ಯ ದಾಖಲೆಗಳು.

7) ಮಧ್ಯವರ್ತಿಗಳ ಮೂಲಕ ಸಲ್ಲಿಸುವ ಅರ್ಜಿಗಳನ್ನು ಪುರಸ್ಕರಿಸ ಲಾಗುವುದಿಲ್ಲ.

8) ವಾಸ ಸ್ಥಳದ ಪುರಾವೆಗಾಗಿ ಈ ಕೆಳಕಂಡ ದಾಖಲೆಗಳಲ್ಲಿ ಒಂದನ್ನುಒದಗಿಸಬಹುದು.

ಅ) ಟೆಲಿಫೋನ್ ಬಿಲ್

ಆ) ಎಲ್‌ಪಿಜಿ ರಶೀದಿ

ಇ) ಡ್ರೈವಿಂಗ್ ಲೈಸನ್ಸ್

ಈ) ಪಾಸ್ ಪೋರ್ಟ್

ಉ) ಸ್ವೀಕೃತಿಯಾದ ಅಂಚೆ ಪತ್ರ

ಊ) ಸರ್ಕಾರಿ/ಸಾರ್ವಜನಿಕ ಉದ್ಯಮ ವಲಯಗಳು ನೀಡಿರುವ ಗುರುತಿನ ಚೀಟಿ

ಎ) ಸ್ವಂತ ಮನೆಯ ತೆರಿಗೆ ಸಂದಾಯ ರಶೀದಿ

ಏ) ಮತದಾರ ಪಟ್ಟಿಯ ಹೆಸರಿನ ದಾಖಲೆ

ಐ) ಬಾಡಿಗೆ ಕರಾರು ಪತ್ರ

ಒ) ವಾಸ ಸ್ಥಳವನ್ನು ಸಾಬೀತು ಪಡಿಸಬಹುದಾದ ಇತರೆ ಯಾವುದೇ ದಸ್ತಾವೇಜು

9) ನಿಗದಿತ ನಮೂನೆಯ ಅರ್ಜಿ ಹಾಗೂ ಸೂಕ್ತ ದಾಖಲಾತಿಗಳನ್ನು ಪರಿಶೀಲಿಸಿ ಆಹಾರ ನಿರೀಕ್ಷಕರು ಸ್ಥಳ ತನಿಖೆ ಮಾಡಿ ಅರ್ಹತೆಯನ್ನು ಪರಿಶೀಲಿಸಿ ವರದಿ ಸಲ್ಲಿಸಿರುತ್ತಾರೆ.

10) ಅಧಿಕೃತವಾಗಿ ಕಛೇರಿಯಲ್ಲಿ ನಿರ್ವಹಿಸುತ್ತಿರುವ ಕಾರ್ಯ ನಿಯೋಜನಾ ರಿಜಿಸ್ಟರ್‌ನಲ್ಲಿ (Assignment Register) ಪಡೆದು ಕಾರ್ಡ್ ಅನ್ನು ವಿತರಿಸಲಾಗುವುದು.

1224 ಶ್ರೀ ಜಾರಕಿಹೊಳಿ ಸತೀಶ್ ಲಕ್ಷ್ಮಣರಾವ್ (ಯಮಕನಮರಡಿ) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಘಟಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆಯು ನಷ್ಟದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಕಾರ್ಖಾನೆಗೆ ಸಹಕಾರಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ನೀಡಲಾಗಿರುವ ಸಾಲವೆಷ್ಟು;

ಇ) ಕಾರ್ಖಾನೆಯು ಬ್ಯಾಂಕುಗಳಿಗೆ ಹಾಗೂ ಸಹಕಾರಿ ಸಂಸ್ಥೆಗಳಿಗೆ ಪಾವತಿ ಮಾಡಬೇಕಾದ ಸಾಲ ಹಾಗೂ ಬಡ್ಡಿ ಎಷ್ಟು;

ಈ) ಬ್ಯಾಂಕುಗಳ ಸಾಲ ವಸೂಲಾತಿಗಾಗಿ ನ್ಯಾಯಾಲಯಕ್ಕೆ ಹೋಗಿವೆಯೇ;

ಉ) ನೌಕರರಿಗೆ ಪ್ರತಿ ತಿಂಗಳು ನಿಗದಿತವಾಗಿ ಸಂಬಳ ನೀಡಲಾಗುತ್ತಿದೆಯೇ ಹಾಗೂ ಅವರ ವೇತನದಲ್ಲಿ ಪಿ.ಎಫ್/ಎಲ್‌ಐಸಿ ಗ್ರ್ಯಾಚುಯಿಟಿ ಇವುಗಳನ್ನು ಕಡಿತಗೊಳಿಸಿ ಪಾವತಿಸಲಾಗುತ್ತಿದೆಯೇ;

ಊ) ಕಾರ್ಖಾನೆಯು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನೀಡಬೇಕಾದ ಕರ ಬಾಕಿ ಇದೆಯೇ;

ಋ) ಕಬ್ಬು ಪೂರೈಕೆದಾರರ/ಸಾಗಾಣಿಕೆದಾರರ/ಮುಕ್ತೆದಾರರ ಹಣಪಾವತಿ ಬಾಕಿ ಇದೆಯೇ;

ಎ) ಕಾರ್ಖಾನೆಯಲ್ಲಿ ದಾಸ್ತಾನು ಇರುವ ಸಕ್ಕರೆಯ ಪ್ರಮಾಣವೆಷ್ಟು;

ಏ) ಕಾರ್ಖಾನೆಗೆ ಸಾಮಗ್ರಿಗಳನ್ನು ಪೂರೈಸಿದವರ ಹಾಗೂ ಇನ್ನಿತರ ಯಾವುದೇ ಹಣ ಪಾವತಿಯಾಗದೆ ಬಾಕಿ ಉಳಿದಿದೆಯೇ?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಅ) ಹೌದು.

ಆ) ಕಾರ್ಖಾನೆಯು ಸಹಕಾರಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಸಾಲದ ವಿವರ, ದಿನಾಂಕ 31–3–2009ರ ಅಂತ್ಯಕ್ಕೆ, ಈ ಕೆಳಕಂಡಂತೆ ಇರುತ್ತದೆ:

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಬ್ಯಾಂಕಿನ ಹೆಸರು	ಮೊಬಲಗು
1	ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಬೆಳಗಾವಿ	3356.00
2	ಕೆನರಾ ಬ್ಯಾಂಕ್, ಬೆಳಗಾವಿ (ಮದ್ಯಮಾವಧಿ ಸಾಲ)	894.00
3	ಕೆನರಾ ಬ್ಯಾಂಕ್, ಬೆಳಗಾವಿ (ಎಕ್ಸ್ಪೆಜ್ ಡ್ಯೂಟಿ ಸಾಲ)	142.00
4	ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬೆಳಗಾವಿ	1000.00
	ಒಟ್ಟು	**5392.00**

ಇ) ಕಾರ್ಖಾನೆ ಬ್ಯಾಂಕುಗಳಿಗೆ ಹಾಗೂ ಸಹಕಾರಿ ಸಂಸ್ಥೆಗಳಿಗೆ ಪಾವತಿ ಮಾಡಬೇಕಾದ ಸಾಲ ಮತ್ತು ಬಡ್ಡಿ ವಿವರ ದಿನಾಂಕ 31–3–2009ರ ಅಂತ್ಯಕ್ಕೆ, ಈ ಕೆಳಕಂಡಂತೆ ಇರುತ್ತದೆ:–

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಬ್ಯಾಂಕಿನ ಹೆಸರು	ಅಸಲು	ಬಡ್ಡಿ
1	ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಬೆಳಗಾವಿ	3356.00	820.00
2	ಕೆನರಾ ಬ್ಯಾಂಕ್, ಬೆಳಗಾವಿ (ಮದ್ಯಮಾವಧಿ ಸಾಲ)	894.00	0.0
3	ಕೆನರಾ ಬ್ಯಾಂಕ್, ಬೆಳಗಾವಿ (ಎಕ್ಸ್ಪೆಜ್ ಡ್ಯೂಟಿ ಸಾಲ)	142.00	0.00
4	ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬೆಳಗಾವಿ	1000.00	0.00
	ಒಟ್ಟು	**5392.00**	**820.00**

ಈ) ಹೌದು.

ಉ) ಇಲ್ಲ.

ಊ) ಹೌದು.

ಋ) ಹೌದು.

ಎ) ಕಾರ್ಖಾನೆಯಲ್ಲಿ ದಿನಾಂಕ 18–7–2009ರ ಅಂತ್ಯಕ್ಕೆ 1,55,684 ಕ್ವಿಂಟಲ್ ಸಕ್ಕರೆ ದಾಸ್ತಾನು ಇರುತ್ತದೆ.

ಏ) ಕಾರ್ಖಾನೆಯು ಸಾಮಗ್ರಿಗಳನ್ನು ಪೂರೈಸಿದವರಿಗೆ ಪಾವತಿಸಬೇಕಾದ ಬಾಕಿ ಹಣವು ದಿನಾಂಕ 31–3–2009ಕ್ಕೆ ರೂ. 599.66 ಲಕ್ಷ ಇರುತ್ತದೆ.

1225 ಶ್ರೀ ಚಾರಕಿಹೊಳಿ ಸತೀಶ್ ಲಕ್ಷ್ಮಣರಾವ್ ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಘಟಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆಗೆ ಬೆಳಗಾವಿ ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕಿನಿಂದ (ಬಿ.ಡಿ.ಸಿ. ಬ್ಯಾಂಕ್) ನೀಡಲಾಗಿರುವ ಸಾಲ ಎಷ್ಟು);

ಆ) ಸಾಲ ಮತ್ತು ಬಡ್ಡಿ ಸಕಾಲಕ್ಕೆ ಮರುಪಾವತಿ ಆಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಸಾಲ ವಸೂಲಾತಿಗಾಗಿ ಬ್ಯಾಂಕು · ಕೈಗೊಂಡಿರುವ ಕ್ರಮವೇನು;

ಈ) ಬ್ಯಾಂಕ್ ನೀಡಿರುವ ಸಾಲದ ಮೊತ್ತವು ಕಾರ್ಖಾನೆಯಲ್ಲಿರುವ ಎಷ್ಟು ಸಕ್ಕರೆ ಚೀಲಗಳಿಗೆ ಹೊಂದಿಕೆಯಾಗುತ್ತದೆ;

ಉ) ಕಾರ್ಖಾನೆಯಲ್ಲಿ ದಾಸ್ತಾನು ಇರುವ ಸಕ್ಕರೆಯ ಪ್ರಮಾಣವೆಷ್ಟು;

ಊ) ಕಾರ್ಖಾನೆಗೆ ಬೇರೆ ಬ್ಯಾಂಕಿನಿಂದ ಸಾಲ ನೀಡಲಾಗಿದೆಯೇ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು)

ಅ) ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಗೆ ರೂ. 21.47 ಕೋಟಿ ಸಾಲ ನೀಡಿರುತ್ತದೆ.

ಆ) ಆಗಿರುವುದಿಲ್ಲ.

ಇ) ಸಾಲ ವಸೂಲಾತಿಗಾಗಿ ದಾವಾ ದಾಖಲಿಸಲಾಗಿರುತ್ತದೆ.

ಈ) ಸಕ್ಕರೆ ಕಾರ್ಖಾನೆಯ ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು ನೀಡಿರುವ ಮಾಹಿತಿ ಪ್ರಕಾರ 1,41,170 ಕ್ವಿಂಟಾಲ್ ಸಕ್ಕರೆಯನ್ನು ಬೆಳಗಾವಿ ಡಿ.ಸಿ.ಸಿ. ಬ್ಯಾಂಕಿಗೆ ಅಡವು ಇಡಲಾಗಿದೆ ಹಾಗೂ 2008–09ನೇ ಹಂಗಾಮುದಲ್ಲಿ ಉತ್ಪಾದನೆಯಾದ 14,514 ಕ್ವಿಂಟಾಲ್ ಸಕ್ಕರೆ ಅಡವು ಇಲ್ಲದೇ ದಾಸ್ತಾನು